6. ನಿಯಮ 69ರ ಮೇರೆಗೆ

(i) ವಿದ್ಯುತ್‌ದರ ಪರಿಷ್ಕರಣೆ ಕುರಿತು ಮಾನ್ಯ ಇಂಧನ ಸಚಿವರಿಂದ ಉತ್ತರ (ಕೆಪಿಟಿಸಿಎಲ್)

+ ಶ್ರೀ ವೀರಕುಮಾರ ಪಾಟೀಲ್(ಇಂಧನ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೇ, ನಾವಿನ್ನೂ ಹ್ಯಾಮ್ಲೆಟ್ಸ್‌ಗಳಿಗೆ ಕರೆಂಟ್ ಕೊಟ್ಟಿಲ್ಲವೆಂದು ಹೇಳಿದರು. ಬರುವ ನಾಲ್ಕುವರೆ ವರ್ಷಗಳಲ್ಲಿ 17 ಸಾವಿರ ಹ್ಯಾಮ್ಲೆಟ್ಸ್‌ಗಳಿಗೆ ವಿದ್ಯುಚ್ಛಕ್ತಿ ಕೊಡುವ ಕೆಲಸವನ್ನು ನಾವು ಮಾಡುತ್ತಾ ಇದ್ದೇವೆ. ಈ ಹ್ಯಾಮ್ಲೆಟ್ಸ್‌ಗಳಿಗೆ ವಿದ್ಯುತ್ ಕೊಡುವುದಕ್ಕೋಸ್ಕರ ಕೇಂದ್ರದಿಂದ ಕೆಲವೊಂದು ಫಂಡ್ಸ್ ಕಾಯುತ್ತಾ ಇದ್ದೇವೆ. ಆ ಫಂಡ್ಸ್ ಬಂದ ಕೂಡಲೇ ಬರುವ ನಾಲ್ಕು ವರ್ಷಗಳಲ್ಲಿ ಈ 17 ಸಾವಿರ ಹ್ಯಾಮ್ಲೆಟ್ಸ್‌ನ್ನು ನಾವು ಕಂಪ್ಲೀಟ್ ಮಾಡುತ್ತೇವೆ. ಇನ್ನು ವಿದ್ಯುಚ್ಛಕ್ತಿ ದರ ಏರಿಕೆ ಬಗ್ಗೆ ಅವರು ಹೇಳಿದರು. ಈ ದರ ಏರಿಕೆ 17 ಪರ್ಸೆಂಟ್ ಹೆಚ್ಚಳವಾಗಿದೆ. ಈ 17 ಪರ್ಸೆಂಟ್ ಹೆಚ್ಚಳವಾಗಿರುವುದರಲ್ಲಿ ಬೇರೆ ಬೇರೆ ಕೆಟಗರಿಗಳೂ ಇವೆ. ಈ ಡೊಮ್ಯಾಸ್ಟಿಕ್ ಎ.ಇ.ಹೆಚ್ ಆಗಲೀ, ಭಾಗ್ಯಜ್ಯೋತಿಯಾಗಲೀ, ಕುಟೀರಜ್ಯೋತಿಯಾಗಲೀ ಐ.ಪಿ.ಸೆಟ್ ಆಗಲೀ, ಇಂಡಸ್ಟ್ರೀಸ್ ಆಗಲೀ ಇವೆಲ್ಲಾ ಕಟ್ಟುವುದರಿಂದ ಆ ರೀತಿಯಾಗಿದೆ. ಸರಾಸರಿ ಜನರೇಷನ್ ಬಗ್ಗೆ ಅವರು ಮಾತನಾಡಿದರು. Power purchased for the year 1999-2000 is at Rs.1.69per unit. It is likely to go up during this year and coming years. ಏಕೆಂದರೆ, ಇಂಡಿಪೆಂಡೆಂಟ್ ಪವರ್ ಬಗ್ಗೆ ಅವರು ಹೇಳಿದರು. ತಣ್ಣೀರುಬಾವಿ ಬಗ್ಗೆ ತಾವು ರೈಸ್ ಮಾಡಿದಿರಿ. ಈ ತಣ್ಣೀರ್‌ಬಾವಿ ಪ್ರಾಜೆಕ್ಟ್‌ನ್ನು ಹೈಕೋರ್ಟ್ ನಿರ್ದೇಶನದ ಮೇಲೆ ಕಟ್ಟಿರುತ್ತೇವೆ. ಇದು ಆದ ಮೇಲೆ, ಯಾವುದೇ ಹೆಚ್ಚುವರಿ ಐ.ಪಿ. ಸೆಟ್ಟುಗಳಿಗೆ ಪವರ್ ಕೊಟ್ಟಿಲ್ಲ ಮತ್ತು ಕೊಡುವುದು ಇಲ್ಲ. ನಾವು ಬೇರೆ ಕಂಪನಿಯವರಿಗೆ ಹೆಚ್ಚುವರಿ ಪವರ್ ಕೊಟ್ಟಿದ್ದೇವೆಂದು ಹೇಳಿದರು, ಅದು ಸರಿಯಲ್ಲ. ನಾವು ತಣ್ಣೀರುಬಾವಿ ಬಿಟ್ಟು ಬೇರೆ ಯಾವುದೇ ಕಂಪನಿಗಳಿಗೆ ಹೆಚ್ಚುವರಿ ಪವರ್ ಕೊಟ್ಟಿರುವುದಿಲ್ಲ. ಪವರ್ ಫ್ರಮ್ ಸೆಂಟ್ರಲ್ ಗ್ರಿಡ್‌ನಿಂದ ನಾವು ತೆಗೆದುಕೊಳ್ಳುತ್ತಾ ಇದ್ದೇವೆ. ಹಾಲಿ ಪವರ್ ಉತ್ಪಾದನೆ ಕಡಿಮೆ ಇದೆ. The state is puttingforth its best efforts to get more power from the central grid. To draw more power from the grid, frequency and voltage have to be taken into account. Otherwise, total collapse of southern grid may occurಏಕೆಂದರೆ, ಫ್ರೀಕ್ವೆನ್ಸಿ ಮತ್ತು ವೋಲ್ಟೇಜ್ ಇದರ ಟ್ಯಾಲಿ ಕರೆಕ್ಟ್ ಆಗಿರಬೇಕು ಅದರ ಸಲುವಾಗಿ ಟೆಕ್ನಿಕಲ್ ಗ್ರೌಂಡ್ ಮೇಲೆ, ಅವರು ಎಷ್ಟು ಪವರ್ ಕೊಡುತ್ತಾರೋ,

ಅದನ್ನು ತೆಗೆದುಕೊಳ್ಳುತ್ತಾ ಇದ್ದೇವೆ. ನಮ್ಮ ರಾಜ್ಯದಲ್ಲಿರತಕ್ಕ ಗ್ರಿಡ್ ಅಷ್ಟು ಸ್ಟ್ರಾಂಗ್ ಇಲ್ಲ. ಆ ಗ್ರಿಡ್‌ನ್ನು ಸ್ಟ್ರಾಂಗ್ ಮಾಡುವ ಸಲುವಾಗಿ, ಸೆಂಟ್ರಲ್ ಗವರ್ನಮೆಂಟಿನವರು Accelerated Power Development Programme ಎಂದು ಡಿಕ್ಲೇರ್ ಮಾಡಿದ್ದಾರೆ. ಆ ಪ್ರೊಗ್ರಾಮ್‌ನಲ್ಲಿ, ಗ್ರಿಡ್ ಸ್ಟ್ರಾಂಗ್ ಮಾಡುವ ಸಲುವಾಗಿ, ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ಮಾಡುವ ಸಲುವಾಗಿ ಬರುವ 2-3 ವರ್ಷಗಳಲ್ಲಿ ನಾವು ಸಾಕಷ್ಟು ಪ್ರೋಗ್ರಾಂ ತೆಗೆದುಕೊಳ್ಳುತ್ತಾ ಇದ್ದೇವೆ. ಆಮೇಲೆ, ಟಿ ಅಂಡ್ ಡಿ ಲಾಸಸ್ ಬಗ್ಗೆ ತಾವು ಹೇಳಿದ್ದೀರಿ. ಇದು 1999-2000ರಲ್ಲಿ 38 ಪರ್ಸೆಂಟ್ ಇತ್ತು. ಕರೆಂಟ್ ವರ್ಷದಲ್ಲಿ ಇದು 36.5 ಪರ್ಸೆಂಟ್‌ಗೆ ಇಳಿದಿದೆ. ಈ ಟಿ ಅಂಡ್ ಡಿ ಲಾಸಸ್ ಪ್ರತಿ ವರ್ಷ it is planned to reduce by 2.5 percent ಆಮೇಲೆ ಸಬ್ಸಿಡಿ ಬಗ್ಗೆ ತಾವು ಹೇಳಿದಿರಿ. ಅದು ಕುಟೀರ ಜ್ಯೋತಿಯಾಗಲೀ ಅಥವಾ ಫ್ರೀ ಕರಂಟ್ ಬಗ್ಗೆ ಇಲ್ಲಿಂದ ಮುಂದೆ ಬಹುಶಃ ಯಾವುದೇ ಕೆಟಗರಿಯಲ್ಲಿ ಉಚಿತ ವಿದ್ಯುತ್ ಕೊಡುವುದಕ್ಕೆ ಸಾಧ್ಯವಿಲ್ಲ. ಅದು ಕುಟೀರಜ್ಯೋತಿಯಾಗಲೀ, ಭಾಗ್ಯಜ್ಯೋತಿಯಾಗಲೀ ಐಪಿ ಸೆಟ್ಟಿಗಾಗಲೀ ಅಥವಾ ಡೊಮ್ಯಾಸ್ಟಿಕ್‌ಗಾಗಲೀ ಯಾವುದೇ ಕೆಟಗರಿಯಲ್ಲಿ ಉಚಿತ ವಿದ್ಯುತ್ ಕೊಡುವ ಪ್ರಶ್ನೆ ಬರುವುದಿಲ್ಲ. ಆಮೇಲೆ, ನಮ್ಮ ಮಂತ್ರಿಮಂಡಲದ ಸದಸ್ಯರ ಬಗ್ಗೆ ಅವರು ಕೆಲವೊಂದು ವಿಷಯಗಳನ್ನು ಹೇಳಿದರು. ಸೊಂಡೂರು ಮೈನ್ಸ್ ಬಗ್ಗೆ ಕಳೆದ ಸಾರಿ ಇದೇ ಸದನದಲ್ಲಿ ನಾನು ಉತ್ತರವನ್ನು ಕೊಟ್ಟಿದ್ದೇನೆ. ಹಿಂದಿನ ಸರ್ಕಾರದವರು ಒಂದು ಆರ್ಡರ್ ಮಾಡಿದ್ದಾರೆ. ಆ ಆರ್ಡರ್ ಪ್ರಕಾರ ನಾವು ಅವರ ಬಿಲ್ ವಸೂಲ್ಮಾಡುತ್ತಾ ಇದ್ದೇವೆ. ಅಲ್ಲಿ ಸ್ಪೆಷಲ್ ಕೇಸ್ ಎಂದು ಯಾವುದೂ ಇಲ್ಲ. ನಮ್ಮ ಸಹೋದ್ಯೋಗಿಗಳು ಮತ್ತು ಕ್ರೀಡಾ ಸಚಿವರ ಬಗ್ಗೆ ಏನು ಇಲ್ಲಿ ರೈಸ್ ಮಾಡಿದರು ಅವರದೇನು ಡ್ಯೂಸ್ ಇದ್ದವು, ಅವೆಲ್ಲವನ್ನೂ ಅವರು ರೆಮಿಟ್ ಮಾಡಿದ್ದಾರೆ. ಅದರ ಬಗ್ಗೆ ಯಾವುದೇ ಸಂಶಯಕ್ಕೆ ಕಾರಣ ಇಲ್ಲ. ಬ್ಯಾಕ್ ಬಿಲ್ಲಿಂಗ್ ಮತ್ತು ದಂಡ ಏನಿತ್ತು, ಅದೆಲ್ಲವನ್ನೂ ಅವರು ರೆಮಿಟ್ ಮಾಡಿದ್ದಾರೆ. ಆದ್ದರಿಂದ, ಅವರ ಬಗ್ಗೆ ಪ್ರಾಸಿಕ್ಯೂಷನ್ ಮಾಡುವ ಪ್ರಶ್ನೆ ಬರುವುದಿಲ್ಲ. ಆಮೇಲೆ, ನಮ್ಮ ಎಂಪ್ಲಾಯೀಸ್ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದರು.